ಇದು ನನ್ನ ಮುಂದಿರುವ ವರದಿ. ಈಗ ಮಳೆಗಾಲ ಕಡಿಮೆಯಾ ಮೇಲೆ ಕೆಲಸ ಶುರು ಮಾಡುತ್ತೇವೆ ಎಂದು ಹೇಳಿದ್ದೇನೆ. ವರ್ಕ್ ಸ್ಯಾಂಕ್ಷನ್ ಆಗಿದೆ. ಮಾನ್‌ಸೂನ್ ಆದ ಮೇಲೆ ಕೆಲಸ ಶುರು ಮಾಡಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಆದೇರೀತಿ ಉಲ್ಲಾಳದ ಬಗ್ಗೆ ಕೂಡ ಕೆಲಸ ಮಂಜೂರಾಗಿದೆ. ಮತ್ತೆ ಈ ಕೆಲಸಕ್ಕೂ ಕೂಡ ಕಂಟ್ರಾಕ್ಟ್‌ಗಳನ್ನು ನೇಮಕ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ತುಂಬಾ ಮನೆಗಳು ಇದ್ದು ಈ ಸಾರಿ ಬುದಂತಹ ಮಳೆಯಿಂದ ಬಹಳಷ್ಟು ಮನೆಗಳು ಕೊಚ್ಚಿ ಹೋಗಿವೆ. ಅಲ್ಲೂ ಕೂಡ ಆದಷ್ಟು ಬೇಗ ಕೆಲಸ ಶುರು ಮಾಡುವಂತೆ ಸಂಬಂಧ ಪಟ್ಟವರಿಗೆ ಸ್ಪಷ್ಟ ಸೂಚನೆ ಕೊಡಬೇಕು. ಅಲ್ಲಿರುವಂತಹ ಅಧಿಕಾರ ವರ್ಗದವರು ಅಷ್ಟು ನಿಗಾ ವಹಿಸುತ್ತಾರೆಂದು ನನಗೆ ಧೈರ್ಯ ಇಲ್ಲ. ಆದ್ದರಿಂದ ತಾವು ಆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಬೇಗ ಕೆಲಸವನ್ನು ಶುರು ಮಾಡುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ವಿಳಂಬ ಮಾಡದೆ ಕೆಲಸವನ್ನು ಶುರು ಮಾಡಿಸುತ್ತೇನೆ.

ಹೈದರಾಬಾದ್ ವೇತನ ಶ್ರೇಣಿಯ ಮರು ವಸೂಲಾತಿ ಕುರಿತು

೯೩೮ (೨೯೮೦) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಉತ್ತರ ಕರ್ನಾಟಕ ಪ್ರದೇಶದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ೧೯೬೮ ರಿಂದ ಹೈದರಾಬಾದ್ ವೇತನ ಶ್ರೇಣಿಯನ್ನು ಸರ್ಕಾರ ನೀಡುತ್ತಿರುವುದು ನಿಜವೇ ?

ಆ) ಈಗ ಅದನ್ನೆಲ್ಲಾ ತಿರುಗಿ ವಸೂಲು ಮಾಡುವಂತೆ ಆದೇಶ ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಯಾವ ಆಧಾರದ ಮೇಲೆ ಈ ಮರು ವಸೂಲಾತಿ ಕ್ರಮ ಕೈಗೊಳ್ಳಲಾಗಿದೆ ?

ಈ) ಹಾಗಿದ್ದಲ್ಲಿ, ಈ ಆಜ್ಞೆಯನ್ನು ವಾಪಸ್ ಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಲು ಉದ್ದೇಶಿಸಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—

ಅ) ದಿನಾಂಕ ೧-೧೧-೧೯೫೬ ರಿಂದ ದಿನಾಂಕ ೩೧-೧೨-೧೯೬೯ರ ಅವಧಿಯಲ್ಲಿ ಸೇವೆಯಲ್ಲಿದ್ದ ಸೇವೆಗೆ ಸೇರಿದ ರಾಜ್ಯವ್ಯಾಪ್ತಿ ಎಲ್ಲಾ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಮಂಜೂರು ಮಂಜೂರು ಮಾಡಲಾಗಿದೆ.

ಆ) ವಸೂಲಿ ಮಾಡುವ ಬಗ್ಗೆ ಆದೇಶ ಹೊರಡಿಸಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈಗ ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದ ಪ್ರಾಥಮಿಕ ಶಿಕ್ಷಕರ ಕಡೆಯಿಂದ ಹಣವನ್ನು ವಾಪಸ್ಸು ಪಡೆಯುವ ಬಗ್ಗೆ ಸರ್ಕಾರ ಆದೇಶವನ್ನು ಹೊರಡಿಸಿಲ್ಲ ಮೇಲು ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆದರೆ ಉತ್ತರ ಕರ್ನಾಟಕ ಭಾಗದ ಪ್ರಾಥಮಿಕ ಶಿಕ್ಷಕರ ವೃಂದದಲ್ಲಿ ಈ ಬಗ್ಗೆ ಒಂದು ದೊಡ್ಡ ಗೊಂದಲ ಹಬ್ಬಿದೆ. ಪೆಬ್ರವರಿ ೫ನೇ ತಾರೀಖು ನಡೆದಂತಹ ಶಿಕ್ಷಕರ ದಿನಾಚರಣೆಯ ಸಮಾರಂಭದಲ್ಲಿ ನಾನು ಬೀಳಗಿ ಹಾಗೂ ಜಮಖಂಡಿಯಲ್ಲಿ ನಡೆದಂತಹ ಸಭೆಗಳಲ್ಲಿ ಭಾಗವಹಿಸಿದ್ದೆ. ಆ ಒಂದು ಸಮಾರಂಭದಲ್ಲಿ ಶಿಕ್ಷಕರಿಗೆ ಸನ್ಮಾನ ಮಾಡುವಾಗ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಶಾಲು ಹೊದಿಸುವಾಗ ಆ ಶಿಕ್ಷಕರು ನಮಗೆ ಹಿಂದೆ ನೀಡಿದಂತಹ ಹೈದರಾಬಾದ್ ವೇತನ ಶ್ರೇಣಿಯನ್ನು ನಮ್ಮಗಳಿಂದ ವಸೂಲು ಮಾಡಿಸ್ತಿದ್ದಾರೆ, ನೀವು ನಮ್ಮಗಳಿಗೆ ಶಾಲು ಹೊದಿಸಿ ಹಿಂಸಿಸಬೇಡಿ. ಇದರಿಂದಾಗಿ ನಮಗೆ ಬರಬೇಕಾಗಿದ್ದಂತಹ ಪೆನ್ಷನ್, ಗ್ರಾಚ್ಯುಟಿ ಮುಂತಾದವುಗಳನ್ನು ತಡೆಹಿಡಿದ್ದಾರೆ ಎಂದು ಹೇಳಿದರು. ಆ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಬಹಳ ಸಂತೋಷ. ಆದರೆ ಕೆಲವೊಮ್ಮೆ ಮಂತ್ರಿಗಳಿಗೆ ತಿಳಿಯದೇ ಐ.ಎ.ಎಸ್.

ಅಧಿಕಾರಿಗಳು ಅನಾಹುತ ಮಾಡುತ್ತಿದ್ದಾರೆ. ಹಿಂದೆ ಹೈದರಾಬಾದ್ ವೇತನ ಶ್ರೇಣಿಯನ್ನು ಯಾರ್ಯಾರಿಗೆ ಕೊಟ್ಟಿದ್ದಾರೋ ಅವರಿಂದ ವಾಪಸ್ಸು ವಸೂಲು ಮಾಡುವುದಿಲ್ಲವೆಂದು ಸ್ಪಷ್ಟವಾದ ಆದೇಶವನ್ನು ಹೊರಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಶಿಕ್ಷಣ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಈಗಾಗಲೇ ಆ ಶಿಕ್ಷಕ ವೃಂದದಲ್ಲಿ ಎದ್ದಿರುವಂತಹ ಗೊಂದಲವನ್ನು ನಿವಾರಣೆ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.—ಈ ವೇತನ ಶ್ರೇಣಿಯನ್ನು ಮಂಜೂರು ಮಾಡುವಾಗ ಕೆಲವಾರು ನಿಯಮಗಳನ್ನು ಅನುಸರಿಸಿದ್ದಾರೆ. ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಯಾವ ಅವಧಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು ? ಆ ಅವಧಿಯಲ್ಲಿ ಅವರು ನೇಮಕವಾಗಿದ್ದರೆ ಇದು ಅಂತಹವರಿಗೆ ಅನ್ವಯವಾಗುತ್ತದೆ. ಕಾರಣವೇನೆಂದರೆ, ಅದು ಅದಮೇಲೂ ಬಾಕಿಯವರು ಈ ಒಂದು ವೇತನ ಶ್ರೇಣಿಯನ್ನು ಕೇಳಿದ್ದಾರೆ. ಅಂತಹವರಿಗೆ ತೊಂದರೆ ಯಾಗಿರಬಹುದು. ಅಥವಾ ೩೦-೧೧-೮೭ರಲ್ಲಿ ಸರ್ಕಾರದ ಒಂದು ನಿಯಮಾವಳಿಗಳನ್ನು ಕಳುಹಿಸಿದ್ದಾರೆ. ಆ ಒಂದು ನಿಯಮಾವಳಿ ಪ್ರಕಾರ "...Primary school teachers of the erstwhile District Board Schools, Municipal Boards, Panchayat Schools, private institutions which are taken over by the Government, provided such schools were taken over by the Government prior to 31/12/1969, such employees shall be entitled for such benefits only from the date on which the schools were taken over by the Goverdment." ೩೦-೧೨-೬೯ ರಲ್ಲಿದ್ದಂತಹ ಆ ರೀತಿಯ ಕೆಲವು ನಿಯಮಾವಳಿಗಳ ಪ್ರಕಾರ ಒಪ್ಪಿಗೆ ಕೊಟ್ಟಿದ್ದೇವೆ. ಅದಲ್ಲದೆ ಬೇರೆಯವರೂ ಆ ಬಗ್ಗೆ ಏನಾದರೂ ಪಡೆಯುತ್ತಿದ್ದರೆ ಆ ಒಂದು ನಿಯಮಾವಳಿಗಳ ಪ್ರಕಾರ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಆದರೆ ಇದು ಯಾವ ರೀತಿ ಆಗಿದೆ ? ಎಂಬುದನ್ನು ಹಾಗೂ ಯಾರಾದರೂ ಈ ನಿಯಮಾವಳಿಗಳ ಪ್ರಕಾರವೇ ತೆಗೆದುಕೊಂಡಿದ್ದು ಅಂತಹವರಿಗೆ ಏನಾದರೂ ತೊಂದರೆಯಾಗಿದ್ದು, ಅದನ್ನು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಇಲ್ಲಿ ಏನಾಗಿದೆ ಎಂದರೆ ೧-೧೧-೫೬ರಲ್ಲಿ ಯಾರು ಸರ್ಕಾರಿ ನೌಕರಿಯಲ್ಲಿರಲಿಲ್ಲ ಅಂತಹವರು ಈ ವೇತನವನ್ನು ಪಡೆದಿದ್ದರೆ ವಾಪಸ್ಸು ಕೊಡಬೇಕೆಂದು ಮಾಡಿದ್ದಾರೆ. ನಮ್ಮ ಭಾಗದಲ್ಲಿ ಅನ್ಯಾಯವಾಗಿರುವಂತಹದ್ದು ತಮಗೂ ಗೊತ್ತಿದೆ. ಆಗ ತಮ್ಮ ಜಿಲ್ಲೆಯಲ್ಲೂ (ಧಾರವಾಡ) ಸ್ಕೂಲ್ ಬೋರ್ಡ್ ಅಂತ ಇತ್ತು. ಅದೇ ರೀತಿ ನನ್ನ ಜಿಲ್ಲೆಯಲ್ಲೂ ಸ್ಕೂಲ್ ಬೋರ್ಡ್ ಅಂತ ಇತ್ತು. ೧-೧೧-೫೬ ರಲ್ಲಿ ಯಾರೂ ಸರ್ಕಾರಿ ಶಿಕ್ಷಕರೆಂದು ಇರಲೇ ಇಲ್ಲ. ಅಂತಹ ಳ ಜಿಲ್ಲೆಗಳು ಇವೆ. ಅವುಗಳು ಯಾವುವೆಂದರೆ ಕಾರವಾರ, ಬೆಳಗಾಂ, ಧಾರವಾಡ ಹಾಗೂ ಬಿಜಾಪುರ. ಇಲ್ಲಿ ಆ ರೀತಿಯ ತೊಂದರೆಯಾಗಿದೆ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಆದೇಶವನ್ನು ಹೊರಡಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಹಾಗೇನಾದರೂ ಬೇರೆ ಬೇರೆ ಪ್ರದೇಶಗಳಿಗೆ ಈ ರೀತಿ ತೊಂದರೆ ಯಾಗದಿದ್ದರೆ ಈ ಪ್ರದೇಶಗಳಲ್ಲಿ ಅಂತಹದ್ದು ಏನಾದರೂ ಪ್ರತ್ಯೇಕವಾದ ರೀತಿಯಲ್ಲಿ ತೊಂದರೆ ಯಾಗಿದ್ದು, ಅದೂ ಕೂಡ ನಿಯಮಾವಳಿಗಳ ಪ್ರಕಾರವೇ ನಡೆದಿದ್ದರೆ, ಅಂತಹದ್ದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲಿಸುತ್ತೇನೆ.

ಬಳ್ಳಾರಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಿಸುವುದರ ಕುರಿತು

೯೪೦ (೩೦೩೧) ಶ್ರೀ ಕೆ. ರಾಮಪ್ಪ(ಬಳ್ಳಾರಿ).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಳ್ಳಾರಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಳ್ಳಾರಿಯ ದಾನಶೀಲರೊಬ್ಬರು ಸದರಿ ಕಟ್ಟಡ ನಿರ್ಮಿಸಲು ರೂ. ೭ಲಕ್ಷ ದಾನ ನೀಡಲು ಮುಂದೆ ಬಂದಿರುವುದು ಸತ್ಯಾಂಶವೇ ?